ಶಿಕ್ಷಣ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದ್ದರಿಂದ, ಇದರ ಬಗ್ಗೆ ಏನು ತೀರ್ಮಾನ ಮಾಡಲಾಗಿದೆ ಎಂಬುದರ ಬಗ್ಗೆ ತಿಳಿಸಬೇಕೆಂದು ಮಾನ್ಯ ಸುನೀಲ್‌ಕುಮಾರ್‌ರವರು ಕೇಳಿದ್ದಾರೆ. ವಿದ್ಯಾರ್ಥಿಗಳ ಮನೆಗೆ ಹಣವನ್ನು ತಲುಪಿಸುವಂಥ ಕಾರ್ಯಕ್ರಮವನ್ನು ನಮ್ಮ ಇಲಾಖೆ ಹೊಂದಿಲ್ಲ. ವಿದ್ಯಾರ್ಥಿಗಳು ಓದುತ್ತಿರುವ ಶಿಕ್ಷಣ ಸಂಸ್ಥೆಗೆ ಹಣವನ್ನು ಇಲಾಖೆಯಿಂದ ಕಳುಹಿಸಿಕೊಡುತ್ತೇವೆ. ಆದಾಯದ ಮಿತಿಯನ್ನು ಕೇಂದ್ರ ಸರ್ಕಾರ ಜಾಸ್ತಿ ಮಾಡಿದೆ ಎಂದು ಮಾನ್ಯ ಧ್ರುವನಾರಾಯಣರವರು ಹೇಳಿದರು. ಮೆಡಿಕಲ್ ಕೋರ್ಸ್ ಓದುವ ವಿದ್ಯಾರ್ಥಿಗಳಿಗೆ ಆದಾಯದ ಮಿತಿಯನ್ನು 2 ಲಕ್ಷ ರೂಪಾಯಿವರೆಗೆ ಮಾಡಿದೆ. ಆದರೆ, ನಮ್ಮಲ್ಲಿರತಕ್ಕಂಥ ಕೆಲವು ಕೋರ್ಸ್‌ಗಳಿಗೆ ಆದಾಯದ ಲಿಮಿಟ್ ಅನ್ನು ಜಾಸ್ತಿ ಮಾಡಿಲ್ಲ. ಕಳೆದ ಸಾಲಿನ ಶುಲ್ಕವನ್ನು ಭರಿಸುವುದಕ್ಕಾಗಿ ಏತಕ್ಕಾಗಿ ತೊಂದರೆಯಾಯಿತೆಂಬುದರ ಬಗ್ಗೆ ಮಾನ್ಯ ಸದಸ್ಯರು ಕೇಳಿದರು. ಈ ಸಾರಿ ಮಾಡುವುದಕ್ಕೆ ಪುಲ್‌ಫಂಡ್‌ನಿಂದ ಜಾಸ್ತಿ ಹಣವನ್ನು ತೆಗೆದುಕೊಂಡಿದ್ದೇವೆ. 2007–08ನೇ ಸಾಲಿನಲ್ಲಿ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಕೊಡಬೇಕಾಗಿರತಕ್ಕಂಥ ಯಾವುದೇ ಶುಲ್ಕ ಬಾಕಿ ಉಳಿಯುವುದಿಲ್ಲ. ಎಲ್ಲವನ್ನೂ ಕ್ಲಿಯರ್ ಮಾಡಿ ಕೊಡಲಾಗುವುದೆಂದು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ತಿಳಿಸುವುದಕ್ಕೆ ಬಯಸುತ್ತೇನೆ.

ಆಸ್ಪತ್ರೆಯನ್ನು ಪ್ರಾರಂಭಿಸುವ ಬಗ್ಗೆ

130 (708) ಶ್ರೀ ಎಂ.ವೈ. ಪಾಟೀಲ್ (ಅಫಜಲ್‌ಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) ಅಫಜಲಪುರ ತಾಲ್ಲೂಕಿನ ಫತ್ತರಗಾ ಗ್ರಾಮವು ಯಾತ್ರಾ ಸ್ಥಳವಾಗಿದ್ದು. ಅಲ್ಲದೆ ಇಲ್ಲಿ ರೇಣುಕಾ ಶುಗರ್ ಸ್ಥಾಪನೆಯಾಗಿದ್ದು, ಇಲ್ಲಿನ ಕಾರ್ಮಿಕರಿಗೆ, ಯಾತ್ರಿಕರಿಗೆ ಹಾಗೂ ರೈತರಿಗೆ ಅನುಕೂಲವಾಗಲು ಆಸ್ಪತ್ರೆ ಅವಶ್ಯಕತೆ ಇರುವುದು ಸರ್ಕಾರದ ಗಮನದಲ್ಲಿದೆಯಾ ;

(ಆ) ಹಾಗಿದ್ದಲ್ಲಿ ಆಸ್ಪತ್ರೆಗಳನ್ನು ಯಾವಾಗ ಪ್ರಾರಂಭಿಸುವಿರಿ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :–

(ಅ) ಫತ್ತರಗಾ ಗ್ರಾಮದಲ್ಲಿ ಹೊಸ ಆಸ್ಪತ್ರೆ ಸ್ಥಾಪಿಸಲು ಯಾವ ಪ್ರಸ್ತಾವನೆ ಇರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

ಶ್ರೀ ಎಂ.ವೈ. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಅಫಜಲಪುರ ತಾಲ್ಲೂಕಿನ ಫತ್ತರಗಾ ಗ್ರಾಮವು ಒಂದು ಯಾತ್ರಾ ಸ್ಥಳವಾಗಿದ್ದು, ಅಲ್ಲಿ ಒಂದು

ರೇಣುಕಾ ಷುಗರ್ ಫ್ಯಾಕ್ಟರಿ ಕೂಡ ಬಂದಿದೆ. ಜನರ ಆರೋಗ್ಯದ ಸಲುವಾಗಿ ಅಲ್ಲಿ ಯಾವುದೇ ಅನುಕೂಲತೆಗಳು ಇಲ್ಲ. ಆದರೆ ಅಲ್ಲಿ ಒಂದು ಆಸ್ಪತ್ರೆ ಅವಶ್ಯಕತೆ ಇದೆ. ಅವರು ತಮ್ಮ ಉತ್ತರದಲ್ಲಿ ಪ್ರಸ್ತಾವನೆ ಬಂದಿಲ್ಲವೆಂದು ಹೇಳುತ್ತಾರೆ. ನಾನು ಆ ಭಾಗದ ಶಾಸಕನಾಗಿ ಈ ಬೇಡಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅಲ್ಲಿ ಒಂದು ಆಸ್ಪತ್ರೆಯ ಅವಶ್ಯಕತೆ ಇದೆ, ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಫತ್ತರಗಾ ಗ್ರಾಮದಲ್ಲಿ ಜಾತ್ರೆ ನಡೆಯುತ್ತದೆ. ಆ ಸಂದರ್ಭದಲ್ಲಿ ಡಾಕ್ಟರ್ ವ್ಯವಸ್ಥೆಯನ್ನು ಜಾತ್ರೆ ದಿವಸ ಮಾಡಬಹುದು. ಮತ್ತು ನಮ್ಮ ಸರ್ಕಾರದ ಆದೇಶದ ಪ್ರಕಾರ ಗ್ರಾಮ ಪಂಚಾಯತಿ 4 ಎಕರೆ ಜಮೀನು ಒಂದು ಲಕ್ಷಗಳ ಅನುದಾನವನ್ನು ಕೊಡಬೇಕಾಗುತ್ತದೆ. ಅದನ್ನು ಒದಗಿಸಿದರೆ ಅಲ್ಲಿ ಆಸ್ಪತ್ರೆಯನ್ನು ತೆಗೆಯುವುದಕ್ಕೆ ನಾವು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವೈ. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಜಾತ್ರೆಯ ದಿವಸ ಅಷ್ಟೇ ಅಲ್ಲ, ಅಲ್ಲಿ ದಿನಾಲೂ ಸಾವಿರಾರು ಸಂಖ್ಯೆಯಲ್ಲಿ ಜನ ಬರುತ್ತಾರೆ. 4 ಎಕರೆ ಜಮೀನು ಒಂದು ಲಕ್ಷ ರೂ.ಗಳ contribution ಅನ್ನು ಗ್ರಾಮ ಪಂಚಾಯಿತಿಯಿಂದ ಒದಗಿಸುತ್ತೇವೆಂದು ಮಾನ್ಯ ಸಚಿವರಿಗೆ ನಾನು ಭರವಸೆ ಕೊಡುತ್ತೇನೆ.

ಶ್ರೀ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಮಾಡುತ್ತೇವೆ.

ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಣಗೊಳಿಸುವುದು

131 (1019) ಶ್ರೀ ಕೆ.ಎಸ್. ಕಿರಣ್ ಕುಮಾರ್ (ಕಳ್ಳಂಬೆಳ್ಳ) :– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಹುಳಿಯಾರು ಹೋಬಳಿ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :–

(ಅ) ಪ್ರಸ್ತಾವನೆ ಬಂದಿರುತ್ತದೆ.

(ಆ) ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.